ಒಂದು ಲಕ್ಷ ಜನರಿಗೆ ಸೇವೆ ಒದಗಿಸುವ ಪೋಲೀಸ್ ಸ್ಟೇಷನ್ ಭಾರೀ ಇಕ್ಕಟ್ಟಾಗಿರುತ್ತದೆ. ಪೋಲೀಸ್ ಸ್ಟೇಷನ್ ಕಟ್ಟಲು ಎರಡೂವರೆ ಎಕರೆ ಜಮೀನು ಮೀಸಲಾಗಿ ತೆಗೆದಿಟ್ಟು ಐದಾರು ವರ್ಷಗಳಾಯ್ತು ಪೋಲೀಸ್ ಸ್ಟೇಷನನ್ನು ಸದ್ರಿ ಜಮೀನಿನಲ್ಲಿ ಕಟ್ಟಿಸಿಕೊಡಬೇಕೆಂದು ಕಳೆದ ನಾಲ್ಕು ವರ್ಷಗಳಿಂದ ಕೇಳುತ್ತಾ ಬಂದಿರುತ್ತೇನೆ. ಇನ್ನೂ ಆ ಕೆಲಸವನ್ನು ಪ್ರಾರಂಭ ಮಾಡಿರುವುದಿಲ್ಲ ಆದಕಾರಣ ಈ ಬಾರಿ ಉಳ್ಳಾಲದಲ್ಲಿ ಮೀಸಲಾಗಿಟ್ಟ ಜಮೀನಿನಲ್ಲಿ ಪೋಲೀಸ್ ಸ್ಟೇಷನ್ ಕಟ್ಟಿಸಿಕೊಡುವಂತೆ ಶೀಘ್ರ ಆದೇಶ ನೀಡಬೇಕಾಗಿಯೂ ಅತೀ ಪ್ರಾಮುಖ್ಯವಾದ ಉಳ್ಳಾಲದಲ್ಲಿ ಇದು ಅತಿ ತ್ವರಿತವೆಂಬುದನ್ನು ಗ್ರಹಿಸಬೇಕಾಗಿಯೂ ಈ ಮೂಲಕ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ: (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ಮಾನ್ಯ ಗೃಹ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಓದಬಯಸುತ್ತೇನೆ.

ಮಂಗಳೂರು ತಾಲ್ಲೂಕಿನ ಉಳ್ಳಾಲದಲ್ಲಿ ಪೋಲೀಸ್ ಇಲಾಖೆಯ ವಸತಿಯೇತರ ಕಟ್ಟಡಗಳಿಗೆ ಸಾಕಷ್ಟು ಹಣ ಒದಗಿಸದೇ ಇರುವುದರಿಂದ ಸದರಿ ಟೌನಿನ ಪೋಲೀಸ್ ಠಾಣೆಯ ಕಟ್ಟಡದ ಕೆಲಸವನ್ನು ಈ ಆಯವ್ಯಯ ವರ್ಷದಲ್ಲಿ ಕೈಗೆತ್ತಿಕೊಳ್ಳಲು ಸಾಧ್ಯವಾಗಲಿಲ್ಲ. ಆದುದರಿಂದ ಮುಂದಿನ ಆರ್ಥಿಕ ವರ್ಷದಲ್ಲಿ ಹಣದ ಲಭ್ಯತೆಯನ್ನು ನೋಡಿಕೊಂಡು ಈ ಕೆಲಸವನ್ನು ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದೆಂದು ಈ ಹಿಂದೆ ಮಾನ್ಯ ಸದಸ್ಯರಿಗೆ ತಿಳಿಸಲಾಗಿತ್ತು ಈ ವರ್ಷದ ಆದ್ಯತೆಯ ಪಟ್ಟಿಯಲ್ಲಿ ಸದರಿ ಅಂಶವನ್ನು ಕರ್ನಾಟಕ ರಾಜ್ಯ ಪೋಲೀಸ್ ವಸತಿ ಗೃಹ ನಿರ್ಮಾಣ ನಿಗಮವು ಸೇರಿಸಿದೆ.

ಪೋಲೀಸ್ ವಸತಿ ಗೃಹಗಳು ಮತ್ತು ಪೋಲೀಸ್ ಠಾಣೆ ಕಟ್ಟಡಗಳಿಗಾಗಿ ಉಳ್ಳಾಲದಲ್ಲಿ ಮೀಸಲಿಟ್ಟಿರುವ ಭಾಗದಲ್ಲಿ ಈಗ ರೂ 15.77 ಲಕ್ಷ ಅಂದಾಜು ವೆಚ್ಚದಲ್ಲಿ ಒಂದು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹನ್ನೆರಡು ಪೋಲೀಸ್ ಪೇದೆಗಳ ಗೃಹಗಳನ್ನು ಕಟ್ಟಲು ಕೆಲಸವನ್ನು ಪ್ರಾರಂಭಿಸಲಾಗಿದೆ. ಭೂಮಿ ಆಗೆಯುವ ಕೆಲಸ ಮುಗಿದಿದ್ದು ಅಸ್ತಿಭಾರದ ಕಾರ್ಯ ಮುಗಿಯುವ ಹಂತದಲ್ಲಿದೆ.

3) **ಸರಕಾರಿ ನೌಕರರ ವಯೋಮಿತಿಯನ್ನು ಪ್ರಕಟಿಸುವುದು.**

ಶ್ರೀ ಶಿವಾನಂದ ಹೆಚ್ ಕೌಜಲಗಿ: ಮಾನ್ಯ ಅಧ್ಯಕ್ಷರೇ ಸರ್ಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು ಸರ್ಕಾರದವರು ಇದೇ ವರ್ಷ ಮಾರ್ಚ್ 1991 ರೊಳಗಾಗಿ ನಿರ್ಣಯಿಸುವುದಾಗಿ ಹಿಂದಿನ ಸರ್ಕಾರದ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್‌ರವರು ವಿಧಾನಸಭೆಯಲ್ಲಿ ಪ್ರಕಟಿಸಿದ್ದರು. ಆದಕಾರಣ ಇನ್ನೂವರೆಗೂ ಸರ್ಕಾರದ ಪ್ರಕಟಣೆ ನಿವೃತ್ತಿ ವಯೋಮಿತಿಯನ್ನು 58ರಿಂದ 55ರವರೆಗೆ ಇಳಿಸುವ ಬಗ್ಗೆ ಯಾವುದೇ ನಿರ್ಧಾರದ ಬಗ್ಗೆ ಪ್ರಕಟಣೆ ಮಾಡದೇ ಇರುವುದರಿಂದ ನೌಕರದಲ್ಲಿ ನಿರುತ್ಸಾಹ ಉಂಟಾಗಿದೆ. ಹೀಗಾಗಿ ಯಾವುದೇ ಕಛೇರಿಯಲ್ಲಿ ಯಾವುದೇ ಕೆಲಸ ಆಗದೇ ಕೆಲಸ ಕುಂಠಿತವಾಗುತ್ತಲಿದೆ.

ಆದಕಾರಣ ನಿವೃತ್ತಿ ವಯಸ್ಸಿನ ನಿರ್ಣಯದ ಬಗ್ಗೆ ಕೂಡಲೇ ಈ ಸರ್ಕಾರ ಯಾವ ಧೋರಣೆ ಇಟ್ಟುಕೊಂಡಿದೆ ಎಂಬುದನ್ನು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: (ಶಿಕ್ಷಣ ಸಂಸದ್ವೀಯ ವ್ಯವಹಾರಗಳ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಮಾಡಬಯಸುತ್ತೇನೆ.ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಆಗಸ್ಟ್ 1984ರಲ್ಲಿ 55ರಿಂದ 58ಕ್ಕೆ ಹೆಚ್ಚಿಸಿದ್ದು ಈ ಅವಕಾಶವನ್ನು ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ಸರ್ಕಾರದ ಅನುದಾನ ಪಡೆಯುವ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರಿಗೂ ವಿಸ್ತರಿಸಿತು.

ಸರ್ಕಾರಿ ನೌಕರರ ಸೇವಾ ನಿವೃತ್ತಿ ವಯಸ್ಸನ್ನು ಈಗಿನ 58 ವರ್ಷಗಳಿಂದ 55 ವರ್ಷಗಳಿಗೆ ಇಳಿಸಬೇಕೆಂದು ಕೋರಿ ಅನೇಕ ಮನವಿಗಳು ಬಂದಿವೆ. ಈ ಕೋರಿಕೆಗಳು ವಿಶೇಷವಾಗಿ ಬಹುಪಾಲು ಸುಶಿಕ್ಷಿತ ನಿರುದ್ಯೋಗಿ ಯುವಜನರಿಂದ ಬಂದಂಥವುಗಳಾಗಿವೆ ಹಾಗೂ ಕರ್ನಾಟಕ ರಾಜ್ಯ ನೌಕರರ ಸಂಘ ಮತ್ತು ಅಖಿಲ ಭಾರತ ಸರ್ಕಾರಿ ನೌಕರರ ಸಂಘವು ಈಗ ಇರುವ ನೀತಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಕೋರಿದ್ದಾರೆ.

ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಈಗಿನ 58 ವರ್ಷಗಳಿಂದ 55 ವರ್ಷಗಳಿಗೆ ಇಳಿಸುವ ಬಗ್ಗೆ ಈ ಹಿಂದೆ ಸಹ ಸದನದಲ್ಲಿ ಪ್ರಸ್ತಾಪಿಸಲಾಗಿತ್ತು. ಈ ಬಗ್ಗೆ ಸರ್ಕಾರಕ್ಕೆ ತಗುಲುವ ವೆಚ್ಚವೆಷ್ಟು? ಇದರ ಸಾಧಕ-ಭಾಧಕಗಳೇನು? ಎಂಬುದನ್ನು ಸರ್ಕಾರ ಎಲ್ಲಾ ದೃಷ್ಟಿಕೋನಗಳಿಂದ ಎಚ್ಚರಿಕೆಯಿಂದ ಪರ್ಯಾಲೋಚಿಸಬಯಸುತ್ತದೆ. ಈ ಬಗ್ಗೆ ಅಂತಿಮ ನಿರ್ಧಾರವನ್ನು ದಿನಾಂಕ: 31.3.91ರ ನಂತರ ತೆಗೆದುಕೊಳ್ಳಲಾಗುವುದು. ಈ ಹಿನ್ನೆಲೆಯಲ್ಲಿ ಸರ್ಕಾರಿ ನೌಕರರು ನಿರುತ್ಸಾಹರಾಗಬೇಕಾದ ಅವಶ್ಯಕತೆ ಇಲ್ಲ. ಸರ್ಕಾರಿ ಕಾರ್ಯಗಳು ಸುಗಮವಾಗಿ ನಡೆಯುತ್ತಿವೆ.

**4) ದ.ಕ. ಜಿಲ್ಲೆಯ ಕೊಣಜೆ ವಿದ್ಯುತ್ ಪ್ರಸರಣಾ ಕೇಂದ್ರದಲ್ಲಿ ಅಧಿಕ ಶಕ್ತಿಯ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಬಗ್ಗೆ**

ಶ್ರೀ ಎ. ರುಕ್ಮಯ್ಯ ಪೂಜಾರಿ: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಬಂಟ್ವಾಳ ತಾಲ್ಲೂಕಿಗೊಳಪಟ್ಟ ಕೊಣಾಜೆ ವಿದ್ಯುತ್ ಪ್ರಸರಣಾ ಕೇಂದ್ರವು ಅತ್ಯಧಿಕ ಹೊರೆಯಿಂದಾಗಿ ಸಂಬಂಧಪಟ್ಟ ಪ್ರದೇಶಗಳಲ್ಲಿನ ವಿದ್ಯುತ್ ಜೋಡಣಾ ಕೆಲಸಗಳಿಗೆ ಸಲ್ಲಿಸಿದ ಅರ್ಜಿಗಳು ಬಾಕಿ ಉಳಿದು ಗ್ರಾಹಕರು ತುಂಬಾ ತೊಂದರೆಗೊಳಗಾಗಿದ್ದಾರೆ. ಮಂಡಳಿಯಲ್ಲಿ ವಿಚಾರಿಸಿದರೆ ಫೀಡರುಗಳ ಮತ್ತು ಪ್ರಸರಣಾ ಕೇಂದ್ರ ಅತ್ಯಧಿಕ ಹೊರೆ ಎಂಬಿತ್ಯಾದಿ ಕಾರಣಗಳನ್ನು ಹೇಳುತ್ತಾರೆ. ಪ್ರಸಾರಣಾ ಕೇಂದ್ರಕ್ಕೆ ಅಧಿಕ ಶಕ್ತಿಯ ಟ್ರಾನ್ಸ್‌ಫಾರ್ಮರ್ ಮಂಜೂರಾಗಿದ್ದರೂ ಅದರ ಕಾಮಗಾರಿ ಕೆಲಸವನ್ನೂ ಪ್ರಾರಂಭಿಸದೆ ಮುಖ್ಯವಾಗಿ ಉಳ್ಳಾಲ ಪಜೀರು ಗ್ರಾಮ ಮತ್ತು ಸುತ್ತಮುತ್ತಲಿನ ಗ್ರಾಹಕರು ಲೋ ವೋಲ್ಟೇಜ್ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಆದರೆ ಮಂಗಳೂರು ವಿಭಾಗದ ಕಾರ್ಯ ನಿರ್ವಾಹಕ ಅಭಿಯಂತರರು ಅಥವಾ ಅದಕ್ಕಿಂತ ಕೆಳಗಿನ ಅಧಿಕಾರಿಗಳ ಕೈಯಲ್ಲಿ ಪ್ರಸಾರಣಾ ವಿಭಾಗದ ಮೇಲ್ವಿಚಾರಣೆ ಇಲ್ಲದಿರುವುದರಿಂದ ಮಂಡಳಿಯ ಉಚ್ಚ ಮೇಲಧಿಕಾರಿಗಳ ಮೂಲಕ ಬೇಗನೆ ಕೆಲಸ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುವಂತೆ ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ ವೀರಪ್ಪ ಮೊಯಿಲಿ: (ಶಿಕ್ಷಣ ಸಚಿವರು) ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಈ ಹೇಳಿಕೆಯನ್ನು ಕೊಡಲು ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಕೊಣಜೆ ಗ್ರಾಮದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಒಂದು ವಿದ್ಯುತ್ ವಿತರಣ ಕೇಂದ್ರವು ಕಾರ್ಯವನ್ನು ನಿರ್ವಹಿಸುತ್ತಿದೆ. ಈ ವಿತರಣಾ ಕೇಂದ್ರದಲ್ಲಿ 3 ಎಂ.ವಿ.ಎ. ಸಾಮರ್ಥ್ಯದ 110:11 ಕೆ.ವಿ. ಪವರ್ ಟ್ರಾನ್ಸ್‌ಫಾರ್ಮರ್ ಕೆಲಸ ಮಾಡುತ್ತಿರುತ್ತದೆ. ಈ ವಿತರಣಾ ಕೇಂದ್ರದಿಂದ ಉಳ್ಳಾಲ ಪಜೀರು ಇತ್ಯಾದಿ ಸುತ್ತಮುತ್ತಲ ಗ್ರಾಮಗಳಿಗೆ ವಿದ್ಯುತ್ತನ್ನು ಒದಗಿಸಲಾಗುತ್ತಿದೆ. ಈಗ ಹಾಲಿ ಇರುವ 3 ಎಂ.ವಿ.ಎ ಪರಿವರ್ತಕದ ಮೇಲೆ ಸದ್ಯಕ್ಕೆ ಪೂರ್ತಿ ಲೋಡ್ ಆಗಿರುತ್ತದೆ. ಬೆಳೆಯುತ್ತಿರುವ ವಿದ್ಯುಚ್ಛಕ್ತಿ ಬೇಡಿಕೆಯನ್ನು ಪೂರೈಸಲು ಈ ವಿತರಣಾ ಕೇಂದ್ರದಲ್ಲಿ ಈಗಿರುವ 3 ಎಂ.ವಿ.ಎ ಪರಿವರ್ತಕದ ಜಾಗದಲ್ಲಿ ಒಂದು 10ಎಂ.ವಿ.ಎ. 110:11ಕೆ.ವಿ. ಸಾಮರ್ಥ್ಯದ ಪರಿವರ್ತಕವನ್ನು ಹಾಕಲು ಯೋಜಿಸಲಾಗಿದ್ದು